20.	Bangalore (R)	10754
21.	Bagalkote	217
22.	Chamarajanagar	169
23.	Davanagere	268
24.	Gadag	253
25.	Haveri	145
26.	Koppal	99
27.	Udupi	285
	Total	248829

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (ಅ) ಚುಕ್ಕೆ ಗುರ್ತಿನ ಮತ್ತು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರ ಬಾರದಿರುವ ಬಗ್ಗೆ.

ಅಧ್ಯಕ್ಷರು : ಮಂಡಿಸಲಾಯಿತು, ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಶೂನ್ಯ ವೇಳೆಯಲ್ಲಿ ತಾವು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಕೇಳಿದ್ದಿರಿ. ಪ್ರಾರಂಭ ಮಾಡಿ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಕಳೆದ ವಾರ ನಾನು ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ಬಂದಿರಲಿಲ್ಲ. ಇದರ ಬಗ್ಗೆ ತಮ್ಮ ಕಛೇರಿಯಲ್ಲಿ ಭೇಟಿ ಮಾಡಿ ಹೇಳಿದಾಗ ಮುಂದಿನ ವಾರ ಖಂಡಿತ ಕೊಡಿಸೋಣ ಎನ್ನತಕ್ಕಂಥ ಭರವಸೆಯನ್ನು ಸಹ ತಾವು ಕೊಟ್ಟಿರಿ. ಮತ್ತು ಮೊನ್ನೆಯ ದಿವಸ ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಬಂದಿತ್ತು. ಅದರಲ್ಲಿ 3 ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದು ಉಳಿದ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸುತ್ತೇವೆಂದು ಹೇಳಿದರು. ಇಲ್ಲಿಯವರೆಗೆ ಅದಕ್ಕೂ ಕೂಡ ಉತ್ತರವನ್ನು ಒದಗಿಸಿಲ್ಲ. ಚುಕ್ಕೆ ಗುರುತಿನ ಪ್ರಶ್ನೆ ಆಗಲೀ, ಚುಕ್ಕೆ ರಹಿತ ಪ್ರಶ್ನೆ ಆಗಲೀ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೇಳಿದರೆ ಯಾವುದಕ್ಕೂ ಕೂಡ ಇದುವರೆಗೆ ಉತ್ತರ ಬಂದಿಲ್ಲವೆಂದು ಸದನದ ಮೂಲಕ ತಮ್ಮ ಗಮನಕ್ಕೆ ತರುತ್ತೇನೆ. ನಾನು ಕೇಳಿರತಕ್ಕಂಥ ಚುಕ್ಕೆ ಗುರುತಿನ ಪ್ರಶ್ನೆಗೆ ತುರ್ತಾಗಿ ಮುಂದಿನ ವಾರದಲ್ಲಾದರೂ ಉತ್ತರ ಕೊಡಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಹಾಗೆಯೇ ಚುಕ್ಕೆ ರಹಿತ ಪ್ರಶ್ನೆಗೆ ಬರಬೇಕಾಗಿದ್ದ ಉಳಿದ ಉತ್ತರವನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಯಾವ ಯಾವ ಪ್ರಶ್ನೆಗೆ ಉತ್ತರ ಬರಬೇಕು ಎನ್ನುವುದನ್ನು ನನ್ನ ಕಛೇರಿಗೆ ಬಂದು ಬರೆದು ಕೊಡಿ. ನಾನು ಕೂಡಲೇ ಫೋನ್ ಮಾಡಿ ಸಂಬಂಧಪಟ್ಟವರನ್ನು ಕರೆಸುತ್ತೇನೆ.

ಶ್ರೀ ಸಿ. ಗುರುಸ್ವಾಮಿ : ಆಗಬಹುದು.

ಶ್ರೀ ವಿ. ಪಾಪಣ್ಣ : ಮಾನ್ಯ ಅಧ್ಯಕ್ಷರೆ, ಕಳೆದ 6ನೇ ತಾರೀಖು ಕೇಳಿರುವ ಸುಮಾರು 7-8 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲವೆಂದು ಒಂದು ಪಟ್ಟಿ ಮಾಡಿ ತಮಗೆ ಈಗಾಗಲೇ ಕೊಟ್ಟಿದ್ದೇನೆ. ಆ ಉತ್ತರ ಬಂದ ಮೇಲೆ ನಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕೆಂದು ಇಚ್ಛಿಪಟ್ಟಿದ್ದೇವೆ. ಅದಕ್ಕೋಸ್ಕರವೇ ಸರ್ಕಾರ ಅದನ್ನು ತಡೆಹಿಡಿದಿದೆಯೋ ಏನೋ ಎನ್ನುವ ಅನುಮಾನ ನನಗೆ ಬರುತ್ತಿದೆ.

ಅಧ್ಯಕ್ಷರು : ಪೆಂಡಿಂಗ್ ಪ್ರಶ್ನೆಗಳು ಎಷ್ಟಿವೆ ಎಂದು ಲೆಕ್ಕ ಹಾಕಿ ಅದನ್ನು ಶೀಘ್ರವಾಗಿ ಕಳುಹಿಸುವುದಕ್ಕೆ ಏರ್ಪಾಡು ಮಾಡಲಾಗುವುದು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟ ಹಾಗೆ ಸರ್ಕಾರದಿಂದ ಸರಿಯಾದ ಉತ್ತರ ಬರುತ್ತಿಲ್ಲ. ನಾವು ಪ್ರತಿದಿವಸ ನಿಯಮ 351ರ ಅಡಿಯಲ್ಲಿ ಪ್ರಶ್ನೆಗಳನ್ನು ಕಳುಹಿಸಿದರೆ ಅದಕ್ಕೆ ಸರ್ಕಾರದಿಂದ ಉತ್ತರ ಕೊಡುತ್ತಿಲ್ಲ. ಹೀಗಾದರೆ ನಾವು ಯಾವ ರೀತಿ ಮಾಹಿತಿಯನ್ನು ಪಡೆದುಕೊಳ್ಳುವುದು?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದೇ ರೀತಿ ಹಲವು ಶಾಸಕರು ನನ್ನ ಹತ್ತಿರ ಬಂದು ಹೇಳುತ್ತಾರೆ. ಕೊನೆಯಪಕ್ಷ ಕೇಳಿರುವ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಬಂದರೆ ಸಂಬಂಧಪಟ್ಟವರಿಗೆ ಮಾಹಿತಿ ಸಿಗುತ್ತದೆ. ಇಲ್ಲದಿದ್ದರೆ ಅವರು ಪ್ರಶ್ನೆ ಕೇಳುವುದು ನಿರರ್ಥಕವಾಗುತ್ತದೆ. ಇದರ ಬಗ್ಗೆ ಗಂಭೀರವಾದ ಚಿಂತನೆ ಆಗಬೇಕಾಗಿದೆ.

ಅಧ್ಯಕ್ಷರು : ಶ್ರೀ ಚಂದ್ರೇಗೌಡರೆ, ಬೇಗ ಬೇಗ ಉತ್ತರಗಳನ್ನು ಕಳುಹಿಸಿಕೊಡುವುದಕ್ಕೆ ಸ್ವಲ್ಪ ಗೇರ್‌ಅಪ್ ಮಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಮೊದಲೇ ಸೂಚನೆ ಕೊಟ್ಟ ಹಾಗೆ ನಾವು ತಮ್ಮ ಕಾರ್ಯಾಲಯದಲ್ಲಿ ಕುಳಿತು ಚರ್ಚೆ ಮಾಡಬೇಕಾಗುತ್ತದೆ. ಸದನದಲ್ಲಿಯೇ ಪ್ರಶ್ನೆ ಕೇಳಿ ಸದನದಲ್ಲಿಯೇ ಉತ್ತರ ಹೇಳಿ ಎಂದರೆ ಸ್ವಲ್ಪ ಕಷ್ಟವಾಗುತ್ತದೆ. ಅದಕ್ಕೋಸ್ಕರ ಮಾನ್ಯ ಅಧ್ಯಕ್ಷರ ಕಾರ್ಯಾಲಯಕ್ಕೆ ಬಂದರೆ ಜಂಟಿಯಾಗಿ ಕುಳಿತು ಯಾವ ಯಾವುದು ಏನೇನು ಇತ್ಯಾದಿಗಳನ್ನು ತಿಳಿದುಕೊಳ್ಳಬಹುದು.

ಅಧ್ಯಕ್ಷರು : ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾವು ನಿಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಅಧಿವೇಶನ ಮುಗಿಯುವುದರೊಳಗಾಗಿ ಇಂಥಿಂಥ ಸದಸ್ಯರು ಇಂತಿಷ್ಟು ಚುಕ್ಕೆ ಗುರುತಿನ ಮತ್ತು ಚುಕ್ಕೆ ರಹಿತ ಪ್ರಶ್ನೆಗಳನ್ನು ಕೇಳಿದ್ದಾರೆ ಮತ್ತು ಇಂತಿಷ್ಟು ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಕೊಟ್ಟಿದ್ದು ಬಾಕಿ ಇಂತಿಷ್ಟು ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿದೆ ಎಂಬ ಮಾಹಿತಿಯನ್ನು ಸ್ಪೆಸಿಫಿಕ್ ಆಗಿ ಇಲ್ಲಿ ಕೊಡಿ. ಆಗ ನಾವು ನಿಮ್ಮ ಹತ್ತಿರ ಇಂತಹವುಗಳಿಗೆ

ಉತ್ತರ ಬಂದಿಲ್ಲ ಎಂದು ಹೇಳಿಕೊಳ್ಳುತ್ತೇವೆ. ತಾವು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುವುದಕ್ಕಾಗುತ್ತದೆ. ಮತ್ತು ಚುಕ್ಕೆ ಗುರುತಿನ ಮತ್ತು ಚುಕ್ಕೆ ರಹಿತ ಯಾವ ಯಾವ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲವೆಂದು ಗೊತ್ತಾಗುತ್ತದೆ. ಏಕೆಂದರೆ ಸರ್ಕಾರದಿಂದ ಸರಿಯಾಗಿ ಉತ್ತರ ಬರುತ್ತಿಲ್ಲ.

ಅಧ್ಯಕ್ಷರು : ಅದನ್ನೆಲ್ಲ ನಮ್ಮ ಕಛೇರಿಯಲ್ಲಿ ತಯಾರು ಮಾಡುತ್ತೇವೆ. ತಯಾರು ಮಾಡಿ ಸಾಧ್ಯವಾದರೆ ಸೋಮವಾರದ ದಿವಸವೇ ಅದನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

(ಅ) ರಾಜ್ಯದ ಎಲ್ಲಾ ಕಡೆಯಲ್ಲಿ ಕಾನೂನು ಸುವ್ಯವಸ್ಥೆ ಕೆಟ್ಟಿರುವ ವಿಚಾರ.

+ ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ರಾಜ್ಯದ ಎಲ್ಲಾ ಕಡೆಯಲ್ಲಿ ಕಾನೂನು ಸುವ್ಯವಸ್ಥೆ ಕೆಡುತ್ತಿರುವ ವಿಚಾರವನ್ನು ನಾವು ಈ ಸದನದಲ್ಲಿ ಆಗಾಗ ಪ್ರಸ್ತಾಪ ಮಾಡುತ್ತಾ ಬಂದಿದ್ದೇವೆ ಹಾಗೂ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಸಹ ಬರುತ್ತಿರುವುದನ್ನು ನಾವು ನೋಡಿದ್ದೇವೆ. ಅದರಲ್ಲೂ ಹುಬ್ಬಳ್ಳಿ ಧಾರವಾಡಗಳಲ್ಲಿ ಕಳೆದ 2-3 ತಿಂಗಳುಗಳಿಂದ ಕೊಲೆ, ದರೋಡೆ, ಕಳ್ಳತನ ಮುಂತಾದವು ಸಾಕಷ್ಟು ನಡೆಯುತ್ತಿದೆ. ಅಲ್ಲಿ ಕಳೆದ ತಿಂಗಳು ಡಾ: ಜೋಷಿ ಮತ್ತು ಅವರ ತಮ್ಮನ ಕೊಲೆ ಆಯಿತು. ಆ ಕೊಲೆ ಆದಮೇಲೆ ಕೊಲೆ ಮಾಡಿದವರು ಯಾರು ಎನ್ನುವ ಸುಳಿವು ಪಡೆದು ಯಾರನ್ನೂ ಸಹ ಬಂಧನ ಮಾಡಲು ಪೊಲೀಸರಿಂದ ಸಾಧ್ಯವಾಗಲಿಲ್ಲ. ಹಾಗೆಯೇ ವೈದ್ಯಕೀಯವಾಗಿ ಕೆಲಸ ಮಾಡಿರಕ್ಕಂಥವರು ಮತ್ತು ಒಬ್ಬ ಹಿರಿಯ ಅಧಿಕಾರಿಗಳಾದಂಥ ಡಾ: ಹಿರೇಮಠ್ ಎನ್ನುವವರನ್ನು ವಿದ್ಯಾನಗರದ ಅವರ ಮನೆಯಲ್ಲಿಯೇ ಬೆಳಗ್ಗಿನ ಜಾವ ಕೊಲೆ ಮಾಡಿದ್ದಾರೆಂದು ಇವತ್ತು ಬೆಳಿಗ್ಗೆ 10-00 ಗಂಟೆಗೆ ನನಗೆ ಹುಬ್ಬಳ್ಳಿಯಿಂದ ಫೋನ್ ಬಂತು. ಕಳೆದ ತಿಂಗಳು ಜೋಡಿ ಕೊಲೆ ಆಗಿದ್ದರೆ ಇವತ್ತು ಈ ಕೊಲೆ ಆಗಿದೆ. ಹೀಗಾಗಿ ಹುಬ್ಬಳ್ಳಿ- ಧಾರವಾಡದಲ್ಲಿ ಕಾನೂನು ಸುವ್ಯವಸ್ಥೆ ಬಹಳಷ್ಟು ಹದಗೆಟ್ಟಿದೆ. ಆದರಲ್ಲೂ ನಮ್ಮ ಹುಬ್ಬಳ್ಳಿಯಲ್ಲಿ ಪೊಲೀಸರು ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದಾರೆ. ಏಕೆಂದರೆ 10-15 ವರ್ಷಗಳಿಂದ ಕೆಲವು ಅಧಿಕಾರಿಗಳು ಮತ್ತು ಪೊಲೀಸ್ ಇನ್ಸ್‌ಪೆಕ್ಟರುಗಳು ಒಂದೇ ಕಡೆ ಇದ್ದಾರೆ. ಹುಬ್ಬಳ್ಳಿ-ಧಾರವಾಡಗಳಲ್ಲಿ ಇರತಕ್ಕಂಥ ಪೊಲೀಸರು, ಇನ್ಸ್‌ಪೆಕ್ಟರುಗಳನ್ನು ಬೇರೆ ಕಡೆಗೆ ವರ್ಗ ಮಾಡಿರಿ ಎಂದು ನಾನು ಸಾಕಷ್ಟು ಸಲ ಹೇಳಿದ್ದೇನೆ. ಆದರೆ ಸರ್ಕಾರ ಇದನ್ನು ಸೀರಿಯಸ್ ಆಗಿ ಇಲ್ಲಿಯವರೆಗೆ ತೆಗೆದುಕೊಂಡಿಲ್ಲ. ಪೊಲೀಸರು ಕೇವಲ ದುಡ್ಡು ಮಾಡುವುದಕ್ಕೆ ನಿಂತಿದ್ದಾರೆಯೇ ಹೊರತು ಕೆಲಸ ಮಾಡುವುದಕ್ಕೆ ಅವರಿಗೆ ಆಸಕ್ತಿ ಇಲ್ಲ. 10-15 ವರ್ಷಗಳಿಂದ ಒಂದೇ ಕಡೆ ಇರತಕ್ಕಂಥ ಪೊಲೀಸ್ ಇನ್ಸ್‌ಪೆಕ್ಟರುಗಳನ್ನು ತೆಗೆದು ಬೇರೆ ಕಡೆಗೆ ವರ್ಗ ಮಾಡಿ, ಇಲ್ಲದಿದ್ದರೆ ಹುಬ್ಬಳ್ಳಿ-ಧಾರವಾಡದ ಕಾನೂನು ವ್ಯವಸ್ಥೆ ಪೂರ್ತಿಯಾಗಿ ಹದಗೆಟ್ಟು ಹೋಗುತ್ತದೆ. ಹುಬ್ಬಳ್ಳಿಯಲ್ಲಿ ಒಂದು ರೀತಿಯ ಆತಂಕದ ವಾತಾವರಣ ಏರ್ಪಟ್ಟಿದೆ. ಈ ಕೊಲೆ ಬಗ್ಗೆ ತೀವ್ರಗತಿಯಿಂದ ಗಮನಹರಿಸಿ ತನಿಖೆ ಮಾಡಿ ಅಪರಾಧಿಯನ್ನು ಕಂಡುಹಿಡಿಯುವಂಥ ಕೆಲಸ ಆಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗತಾನೆ ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟಿರುವ ನೋಟೀಸನ್ನು ನೋಡಿದೆ. ಸಂಬಂಧಪಟ್ಟ ಇಲಾಖೆಯಿಂದ ಮಾಹಿತಿಯನ್ನು ತರಿಸುವುದಕ್ಕೆ ಕಳುಹಿಸಿಕೊಟ್ಟಿದ್ದೇನೆ.